ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**06.07.2025 / 1.10 pm**
**<><*<><>*><>**
ಮುಖ್ಯಾಂಶಗಳು

ಮುಖ್ಯಾಂಶಗಳು

೧. ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿಂದು ಭಾಗಿಯಾಗಲಿರುವ ಪ್ರಧಾನಿ ನರೇಂದ್ರ ಮೋದಿ

೨. ಬ್ರೆಜಿಲ್‌ನಲ್ಲಿ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಹಣಕಾಸು ಸಹವರ್ತಿಗಳೊಂದಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಭೆ

೩. ಇಂದು ವಿಶ್ವ ಪ್ರಾಣಿಜನ್ಯ ರೋಗಗಳ ತಡೆಗಟ್ಟುವಿಕೆ ದಿನ; ೨೦೩೦ರೊಳಗೆ ಭಾರತದಲ್ಲಿ ರೇಬೀಸ್ ರೋಗ ನಿರ್ಮೂಲನೆಗೆ ಐಸಿಎಂಆರ್ ಕರೆ

೪. ಆಂಡರ್‌ಸನ್ - ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್; ಎರಡನೇ ಪಂದ್ಯದ ಕೊನೆಯ ದಿನದಾಟದಲ್ಲಿ ಇಂದು ಇಂಗ್ಲೆಂಡ್‌ಗೆ ಕಡಿವಾಣ ಹಾಕುವ ತವಕದಲ್ಲಿ ಭಾರತ

><><><><><><><><

ಬ್ರೆಜಿಲ್‌ನ ರಿಯೋ ಡಿ ಜನೇರಿಯೋದಲ್ಲಿಂದು ನಡೆಯಲಿರುವ ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಶೃಂಗಸಭೆಯಲ್ಲಿ, ವಿಶ್ವ ಆಡಳಿತ ವ್ಯವಸ್ಥೆಯ ಸುಧಾರಣೆ, ಶಾಂತಿ ಮತ್ತು ಭದ್ರತೆ, ಬಹುಪಕ್ಷೀಯತೆಯ ಬಲವರ್ಧನೆ, ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ, ಹವಾಮಾನ ಕ್ರಮಗಳು, ಜಾಗತಿಕ ಆರೋಗ್ಯ, ಆರ್ಥಿಕ ಮತ್ತು ಹಣಕಾಸು ವಿಷಯಗಳು ಸೇರಿದಂತೆ ಪ್ರಮುಖ ಜಾಗತಿಕ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ಇದಕ್ಕೂ ಮುನ್ನ ಇಂದು ಬೆಳಗ್ಗೆ ತಮ್ಮ ಐದು ರಾಷ್ಟ್ರಗಳ ಪ್ರವಾಸದ ನಾಲ್ಕನೇ ಚರಣದ ಭಾಗವಾಗಿ ಅವರು ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ನಗರಕ್ಕೆ ಆಗಮಿಸಿದರು. ಅವರಿಗೆ ಭಾರತೀಯ ಸಮುದಾಯದಿಂದ ಆತ್ಮೀಯ ಸ್ವಾಗತ ಕೋರಲಾಯಿತು. ಈ ವೇಳೆ, ಯಶಸ್ವಿ 'ಆಪರೇಷನ್ ಸಿಂದೂರ್' ಗಾಗಿ ಭಾರತೀಯ ಸಶಸ್ತ್ರ ಪಡೆಗಳಿಗೆ ವನಿತೆಯರ ತಂಡವೊಂದು ಕಥಕ್ ನೃತ್ಯದ ಮೂಲಕ ಗೌರವ ಸಲ್ಲಿಸಿತು. ಬ್ರೆಜಿಲ್ ತಂಡವೊಂದರ ಮಂತ್ರಪಠಣ ಹಾಗೂ ಭಾವಗೀತೆಗಳ ಪ್ರದರ್ಶನ ವಿಶೇಷವಾಗಿತ್ತು. ಶೃಂಗ್ ಸಭೆಯ ನೇಪಥ್ಯದಲ್ಲಿ ಪ್ರಧಾನಿ ನೆರೇಂದ್ರ ಮೋದಿ ಹಲವು ರಾಷ್ಟ್ರಗಳ ನಾಯಕರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅವರು ಬ್ರೆಜಿಲ್ ರಾಜಧಾನಿ ಬ್ರಾಸಿಲಿಯಾ ನಗರಕ್ಕೆ ಕೂಡ ಪ್ರವಾಸ ಬೆಳೆಸಲಿದ್ದು, ಅಲ್ಲಿ ಬ್ರೆಜಿಲ್ ಅಧ್ಯಕ್ಷ

ಲುಯಿಸ್ ಇನಾಸಿಯೋ ಲುಲಾ ಡಾ.ಸಿಲ್ವಾ ಅವರೊಂದಿಗೆ ಭಾರತ-ಬ್ರೆಜಿಲ್ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ವಿಸ್ತರಿಸುವ ಕುರಿತು ಸಮಗ್ರ ಚರ್ಚೆ ನಡೆಸಲಿದ್ದಾರೆ. ಈ ಸಂವಾದ ವ್ಯಾಪಾರ, ರಕ್ಷಣಾ, ಇಂಧನ, ಅಂತರಿಕ್ಷ, ತಂತ್ರಜ್ಞಾನ, ಕೃಷಿ, ಆರೋಗ್ಯ ಮತ್ತು ಜನರಿಂದ-ಜನರ ಸಂಪರ್ಕದಂತಹ ಪರಸ್ಪರ ಹಿತಾಸಕ್ತಿಯ ಕ್ಷೇತ್ರಗಳನ್ನು ಒಳಗೊಂಡಿರಲಿವೆ.

><><><><><><><

ಬ್ರೆಜಿಲ್ ಪ್ರವಾಸದಲ್ಲಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಿಯೊ ಡಿ ಜನೆರೋದಲ್ಲಿ ನಿನ್ನೆ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಸಹವರ್ತಿಗಳೊಂದಿಗೆ ಬಹು ವಲಯಗಳಲ್ಲಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ಉದ್ದೇಶದೊಂದಿಗೆ ಸಭೆಗಳನ್ನು ನಡೆಸಿದ್ದಾರೆ. ಬ್ರಿಕ್ಸ್ ಹಣಕಾಸು ಸಚಿವರು ಹಾಗೂ ಕೇಂದ್ರೀಯ ಬ್ಯಾಂಕ್ ಗವರ್ನರ್‌ಗಳ ಸಭೆಯ ನೇಪಥ್ಯದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್, ರಷ್ಯಾ ಹಣಕಾಸು ಸಚಿವ ಆಂಟಾನ್ ಸಿಲುವನೋವ್ ಅವರೊಂದಿಗೆ ಆರ್ಥಿಕ ವಲಯ ಸೇರಿದಂತೆ ವಿವಿಧ ವಲಯಗಳಾದ್ಯಂತ ದ್ವಿಪಕ್ಷೀಯ ಸಹಕಾರ ಬಲವರ್ಧನೆ ಕುರಿತಂತೆ ಸಮಾಲೋಚನೆ ನಡೆಸಿದ್ದಾರೆ. ಸಚಿವೆ ನಿರ್ಮಲಾ ಸೀತಾರಾಮನ್, ಚೀನಾ ಹಣಕಾಸು ಸಚಿವ ಲ್ಯಾನ್ ಫೊವಾನ್ ಅವರೊಂದಿಗೆ ಸಭೆ ನಡೆಸಿ, ಎರಡು ಅತಿ ದೊಡ್ಡ ಹಾಗೂ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಾಗಿ ಭಾರತ ಮತ್ತು ಚೀನಾ, ಎಲ್ಲರನ್ನೊಳಗೊಳ್ಳುವ ಜಾಗತಿಕ ಅಭಿವೃದ್ಧಿ ಮತ್ತು ನಾವೀನ್ಯತೆಯೆಡೆಗೆ ಸಾಗಲು ಉತ್ತಮ ಸ್ಥಾನದಲ್ಲಿದ್ದು, ಶ್ರೀಮಂತ ಮಾನವ ಸಂಪನ್ಮೂಲ, ಆಳವಾದ ನಾಗರಿಕ ಸಂಬಂಧ ಮತ್ತು ವಿಸ್ತಾರಗೊಳ್ಳುತ್ತಿರುವ ಆರ್ಥಿಕ ಪ್ರಭಾವದ ಹಿನ್ನೆಲೆಯಲ್ಲಿ ಹೆಚ್ಚಿನ ವಲಯಗಳಲ್ಲಿ ಸಹಕಾರ ಬಲಪಡಿಸುವ ಕುರಿತಂತೆ ಚರ್ಚೆ ನಡೆಸಿದ್ದಾರೆ. ಬ್ರೆಜಿಲ್ ಸಚಿವರೊಂದಿಗೆ ಸಭೆಯಲ್ಲಿ ಸಚಿವೆ ನಿರ್ಮಲಾ ಸಿತಾರಾಮನ್, ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಕುರಿತು ಮಾತುಕತೆ ನಡೆಸಿದ್ದಾರೆ.

><><><><><><><

ಇಂದು ಖ್ಯಾತ ಚಿಂತಕ ಮತ್ತು ಶಿಕ್ಷಣ ತಜ್ಞ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ೧೨೪ನೇ ಜನ್ಮ ದಿನಾಚರಣೆ. ಇದರ ಅಂಗವಾಗಿ ಸಂವಿಧಾನ ಸದನದಲ್ಲಿ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಕೇಂದ್ರ ಸಚಿವ ಜೆ.ಪಿ.ನಡ್ಡಾ, ರಾಜ್ಯಸಭಾ ಉಪಸಭಾಪತಿ ಹರಿವಂಶ್ ಸಿಂಗ್ ಮತ್ತಿತರ ನಾಯಕರು ಭಾರತೀಯ ಜನಸಂಘದ ಸಂಸ್ಥಾಪಕ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರಿಗೆ ಪುಷ್ಪನಮನ ಸಲ್ಲಿದ್ದಾರೆ. ಮುಖರ್ಜಿಯವರಿಗೆ ಗೌರವ ನಮನ ಸಲ್ಲಿಸಿರುವ ಪ್ರಧಾನಿ ನರೇಂದ್ರ ಮೋದಿ, ಡಾ.

ಮುಖರ್ಜಿ ಅವರು ದೇಶದ ಗೌರವ, ಘನತೆ ಮತ್ತು ಹೆಮ್ಮೆಯನ್ನು ರಕ್ಷಿಸಲು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿ ಭಾರತದ ನಿರ್ಮಾಣದಲ್ಲಿ ಡಾ. ಮುಖರ್ಜಿ ಅವರ ಆದರ್ಶಗಳು ಮತ್ತು ತತ್ವಗಳು ಅಮೂಲ್ಯವಾಗಿವೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ನವದೆಹಲಿಯ ಶಹೀದ್ ಪಾರ್ಕ್‌ನಲ್ಲಿರುವ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಪುತ್ಥಳಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ದೆಹಲಿ ಮುಖ್ಯಮಂತ್ರಿ ರೇಖಾಗುಪ್ತ ಮತ್ತಿತರ ಸಂಸದರು ಗೌರವ ನಮನ ಸಲ್ಲಿಸಿದ್ದಾರೆ. ಡಾ. ಶ್ಯಾಮ್ ಮುಖರ್ಜಿ ಅವರನ್ನು ಸ್ಮರಿಸಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಮುಖರ್ಜಿ ಅವರು ಭಾರತೀಯ ಭಾಷೆಗಳ ಮಹತ್ವವನ್ನು ಪ್ರತಿಪಾದಿಸುವಲ್ಲಿ ಕೊಡುಗೆ ನೀಡಿದ್ದರು. ಹೊಸ ಶಿಕ್ಷಣ ನೀತಿಯನ್ನು ಪರಿಚಯಿಸುವುದರೊಂದಿಗೆ, ಭಾರತೀಯ ಭಾಷೆಗಳ ಸಂರಕ್ಷಣೆಯವರೆಗಿನ ಕೇಂದ್ರ ಸರ್ಕಾರದ ನೀತಿಗಳು ಡಾ. ಮುಖರ್ಜಿ ಅವರ ದೃಷ್ಟಿಕೋನದೊಂದಿಗೆ ಹೊಂದಿಕೆಯಾಗುತ್ತವೆ ಎಂದು ಅವರು ಹೇಳಿದರು.

**ಧ್ವನಿ: ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ( ೨೭ ಸೆಕೆಂಡ್ಸ್)**

><><><><><><><

ಇಂದು ವಿಶ್ವ ಪ್ರಾಣಿಜನ್ಯ ರೋಗಗಳ ತಡೆಗಟ್ಟುವಿಕೆ ದಿನ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ-ಐಸಿಎಮ್‌ಆರ್ ನಡೆಸಿದ ಅಧ್ಯಯನವು, ೨೦೩೦ರೊಳಗೆ ನಾಯಿಗಳ ಮೂಲಕ ಹರಡುವ ರೇಬೀಸ್ ರೋಗವನ್ನು ನಿರ್ಮೂಲನೆ ಮಾಡಲು ಭಾರತ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದೆ. ಐಸಿಎಮ್‌ಆರ್ ಅಂದಾಜಿನ ಪ್ರಕಾರ, ಪ್ರತಿ ವರ್ಷ ಭಾರತದಾದ್ಯಂತ ಸುಮಾರು ೯೧ ಲಕ್ಷ ಪ್ರಾಣಿ ಕಡಿತ ಪ್ರಕರಣಗಳು ಮತ್ತು ೫ ಸಾವಿರದ ೭೨೬ ಜನರು ರೇಬೀಸ್‌ನಿಂದಾಗಿ ಮೃತಪಟ್ಟಿದ್ದಾರೆ. ಈ ಅಧ್ಯಯನದ ಪ್ರಾಥಮಿಕ ಉದ್ದೇಶವೆಂದರೆ ಪ್ರಾಣಿಗಳ ಕಡಿತದ ಪ್ರಮಾಣವನ್ನು ಅಂದಾಜಿಸುವುದು ಮತ್ತು ಡಿಸಿಷನ್ ಟ್ರೀ ಮಾದರಿಯ ಮೂಲಕ ಮಾನವ ರೇಬೀಸ್ ಮೃತ್ಯುಗಳ ಸಂಖ್ಯೆಯನ್ನು ಅಂದಾಜಿಸುವುದಾಗಿದೆ. ಈ ಸಮೀಕ್ಷೆಯನ್ನು ಶೇಕಡಾ ೯೧.೨ ರಷ್ಟು ಮನೆಗಳಲ್ಲಿ ನಡೆಸಲಾಗಿದೆ. ೧೪ ವರ್ಷದೊಳಗಿನ ಮಕ್ಕಳು ಮತ್ತು ೬೦ ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಲ್ಲಿ ನಾಯಿಗಳ ಕಚ್ಚುವಿಕೆ ಹೆಚ್ಚು ಕಂಡುಬಂದಿದೆ. ಕಡಿತಕ್ಕೆ ಒಳಗಾದವರಲ್ಲಿ ಶೇಕಡಾ ೭೯.೫ ರಷ್ಟು ಜನರು ಕನಿಷ್ಠ ಒಂದು ಡೋಸ್ ರೇಬೀಸ್ ಲಸಿಕೆ ತೆಗೆದುಕೊಂಡಿದ್ದಾರೆ ಎಂದು ಅಧ್ಯಯನ ತಿಳಿಸಿದೆ.

><><><><><><><

ದೇಶದ ವಿವಿಧ ಭಾಗಗಳಲ್ಲಿ ಇಂದು ಆಶೂರ್-ಎ-ಮೊಹರಂ ಅನ್ನು ಶ್ರದ್ಧಾಭಕ್ತಿಯಿಂದ ತ್ಯಾಗ-ಬಲಿದಾನದ ದಿನವಾಗಿ ಆಚರಿಸಲಾಗುತ್ತಿದೆ. ಕರ್ಬಲಾದಲ್ಲಿ ಸತ್ಯ, ಸದಾಚಾರ ಮತ್ತು ನ್ಯಾಯವನ್ನು ಎತ್ತಿಹಿಡಿಯಲು ತಮ್ಮ ಪ್ರಾಣವನ್ನೇ ಅರ್ಪಿಸಿದ ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಮತ್ತು ಅವರ ಸಹಚರರನ್ನು ಈ ದಿನ ಸ್ಮರಿಸಲಾಗುತ್ತದೆ. ಆಶುರ್-ಎ-ಮೊಹರಂ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಅವರ ಬಲಿದಾನವನ್ನು ಸ್ಮರಿಸಿದರು.

><><><><><><><

ಇಂದು ಆಶಾಡ ಏಕಾದಶಿ. ಆಶಾಡ ಮಾಸದ ಮೊದಲ ಏಕದಶಿ ಇದಾಗಿದ್ದು, ದೇವಶಯನಿ ಏಕಾದಶಿ ಎಂದು ಆಚರಿಸಲಾಗುತ್ತದೆ. ಈ ದಿನ, ವಿಷ್ಣು ದೇವನು ತನ್ನ ಜವಾಬ್ದಾರಿಯನ್ನು ಶಿವನಿಗೆ ವಹಿಸಿ, ಯೋಗ ನಿದ್ರೆಗೆ ಜಾರುತ್ತಾನೆ. ಈ ಪುಣ್ಯ ಕಾಲದಲ್ಲಿ ತಪಸ್ಸು, ಯೋಗ, ಮಂತ್ರಪಠಣ ಮತ್ತು ಧಾರ್ಮಿಕ ಆಚರಣೆಗಳು ಹೆಚ್ಚು ಫಲಪ್ರದವಾಗುತ್ತವೆ ಎನ್ನುವ ನಂಬಿಕೆಯಿದೆ. ಈ ಶುಭ ಸಂದರ್ಭದಲ್ಲಿ ಸಮಸ್ತ ಜನತೆಗೆ ಶುಭಾಶಯ ಕೋರಿರುವ ಪ್ರಧಾನಿ ನರೇಂದ್ರ ಮೋದಿ, ಈ ವಿಶೇಷ ದಿನದಂದು ಭಗವಾನ್ ವಿಠ್ಠಲರ ಆಶೀರ್ವಾದವನ್ನು ಕೋರಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

><><><><><><><

ಉದ್ಯಮಿ ಎಲಾನ್ ಮಸ್ಕ್, ಅಮೆರಿಕಾದಲ್ಲಿ "ಅಮೆರಿಕಾ ಪಾರ್ಟಿ" ಎಂಬ ಹೆಸರಿನ ಹೊಸ ರಾಜಕೀಯ ಪಕ್ಷವನ್ನು ಪ್ರಾರಂಭಿಸುತ್ತಿರುವುದಾಗಿ ಘೋಷಿಸಿದ್ದಾರೆ. ರಿಪಬ್ಲಿಕನ್ ಮತ್ತು ಡೆಮಾಕ್ರಾಟ್ ಪಕ್ಷಗಳಿಗೆ ಬದಲಾಗಿ ಒಂದು ಪರ್ಯಾಯ ಅವಕಾಶವನ್ನು ಜನರಿಗೆ ಒದಗಿಸುವುದು ಮತ್ತು ದ್ವಿಪಕ್ಷೀಯ ವ್ಯವಸ್ಥೆಗೆ ಬದಲಾವಣೆ ತರುವುದು ಈ ಪಕ್ಷದ ಉದ್ದೇಶವಾಗಿದೆ.

><><><><><><><

ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬ್ಯಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ - ಇಂಗ್ಲೆಂಡ್ ನಡುವಿನ ಆಂಡರ್‌ಸನ್ - ತೆಂಡೂಲ್ಕರ್ ಟ್ರೋಫಿಯ ಎರಡನೇ ಟೆಸ್ಟ್ ಪಂದ್ಯದ ಕೊನೆಯ ದಿನವಾದ ಇಂದು, ದಿನದಾಟ ಭಾರತೀಯ ಕಾಲಮಾನ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದ್ದು, ಇಂಗ್ಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ಅನ್ನು ಮುಂದುವರಿಸಲಿದೆ. ನಾಲ್ಕನೇ ದಿನವಾದ ನಿನ್ನೆ, ಭಾರತದ ಪರ

ಶುಭ್‌ಮನ್ ಗಿಲ್ ಅವರ ಮತ್ತೊಂದು ಉತ್ತಮ ಆಟ ಹಾಗೂ ೧೬೧ ರನ್ ಮತ್ತು ಕೆ.ಎಲ್.ರಾಹುಲ್ ೫೫, ರಿಷಬ್ ಪಂತ್ ೬೫, ರವೀಂದ್ರ ಜಡೇಜಾ ೬೯ ರನ್‌ಗಳ ನೆರವಿನೊಂದಿಗೆ ತಮ್ಮ ಎರಡನೇ ಇನ್ನಿಂಗ್ಸ್‌ನಲ್ಲಿ ೬ ವಿಕೆಟ್ ನಷ್ಟಕ್ಕೆ ೪೨೭ ರನ್ ಗಳಿಸಿ, ಡಿಕ್ಲೇರ್ ಘೋಷಿಸಿದರು. ಬಳಿಕ ಭಾರತ ನೀಡಿದ ೬೦೮ ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಇಂಗ್ಲೆಂಡ್, ದಿನದ ಅಂತ್ಯದ ವೇಳೆಗೆ ಆಡಿದ ೧೬ ಓವರ್‌ಗಳಲ್ಲಿ ಭಾರತ ಕರಾರುವಾಕ್ ಬೌಲಿಂಗ್ ದಾಳಿಗೆ ಮೂರು ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡು, ೭೨ ರನ್ ಗಳಿಸಿದೆ. ಆಲಿ ಪೋಪ್ ೨೪, ಹ್ಯಾರಿಬ್ರೂಕ್ ೧೫ ರನ್ ಗಳಿಸಿ, ಕಣದಲ್ಲಿದ್ದಾರೆ.

><><><><><><><><

ಇಂದು ಟಿಬೆಟಿಯನ್ ಆಧ್ಯಾತ್ಮಿಕ ನಾಯಕ ದಲೈ ಲಾಮಾ ಅವರ ೯೦ನೇ ಜನ್ಮ ದಿನಾಚರಣೆ. ಈ ಹಿನ್ನೆಲೆ ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ೧೪೦ ಕೋಟಿ ಭಾರತೀಯರ ಪರವಾಗಿ ದಲೈ ಲಾಮಾ ಅವರಿಗೆ ಶುಭಾಶಯ ಸಲ್ಲಿಸಿದ್ದಾರೆ.

><><><><><><><><